**ಸಾಕ್ಷಿಯನ್ನು ದಿನಾಂಕಃ 04-12-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ ಪ್ರತಿವಾದಿ ಪರ ವಕೀಲರವರಿಂದಃ**

1. ನನಗೆ ಓದಲು ಬರೆಯಲು ಬರುವುದಿಲ್ಲ. ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿವೆ. ದಾವೆ ಸಲ್ಲಿಸಲು ನಾನೇ ಮಾಹಿತಿ ನೀಡಿದ್ದೇನೆ. ದಾವಾ ಅಸ್ತಿಯು ಉದ್ದ 15 ಅಡಿ ಮತ್ತು ಅಗಲ 19 ಅಡಿ ಇರುವುದು. ಆ ಅಳತೆಯನ್ನು ತೋರಿಸಲು ದಾಖಲೆಯನ್ನು ಕೊಟ್ಟಿದ್ದೇನೆ. ತಿದ್ದು ಪಡಿ ವಾದ ಪತ್ರದಲ್ಲಿ ಕಾಣಿಸಿದಂತೆ ದಾವಾ ಅಸ್ತಿಯ ಉದ್ದ 11 ಅಡಿ ಮತ್ತು ಅಗಲ 19 ಅಡಿ ಎಂದು ತೋರಿಸಲು ದಾಖಲೆ ಹಾಜರು ಪಡಿಸಿದ್ದೇನೆ. ದಾವಾ ಅಸ್ತಿಯು ಮೂಲತಃ ನನ್ನ ಗಂಡನ ತಂದೆಯ ಹೆಸರಿನಲ್ಲಿತ್ತು. ಅದನ್ನು ತೊರಿಸಲು ದಾಖಲೆ ಹಾಜರು ಪಡಿಸಿದ್ದೇನೆ. ಸದರಿ ಅಸ್ತಿಯನ್ನು ನನ್ನ ಗಂಡನಾದ ಬುಜಂಗಪ್ಪ ಮತ್ತು ಅವರ ಸಹೋದರರಾದ ನಿಂಗಪ್ಪ ಮತ್ತು ಅನಂದಪ್ಪ ಇವರು ಲಿಖಿತವಾಗಿ ಪಾಲು ವಿಭಾಗ ಮಾಡಿಕೊಂಡ ಕಾರಣ ದಾವಾ ಅಸ್ತಿಯ ನನ್ನ ಗಂಡನ ಹೆಸರಿಗೆ ಬಂದಿರುತ್ತದೆ. ಆ ರೀತಿ ಪಾಲು ವಿಭಾಗ ಆಗಿದೆ ಎಂದು ತೋರಿಸಲು ದಾಖಲೆಯನ್ನು ಹಾಜರು ಪಡಿಸಿದ್ದೇನೆ. ಸದರಿ ಪಾಲು ವಿಭಾಗದ ಪ್ರಕಾರ ಮೇಲೆ ಹೇಳಿದ 3 ಜನರಿಗೆ ಸಮಾನ ಹಿಸ್ಸೆ ಬಂದಿರುತ್ತದೆ.

2. ಪಾಲು ವಿಭಾಗದ ಪೂರ್ವದಲ್ಲಿ ಇದ್ದ ಒಟ್ಟು ವಿಸ್ತೀರ್ಣವನ್ನು ತೋರಿಸಲು ದಾಖಲೆಯನ್ನು ನಾನು ಹಾಜರು ಪಡಿಸಿದ್ದೇನೆ.

**ಸಾಕ್ಷಿಯ ಸಹಿ** 04.12.2025

ಉಪನೊಂದಾಣಿದಿಕಾರಿಯವರು ಯಾವ ದಾಖಲೆಯನ್ನು ನನ್ನ ಹೆಸರಿನಲಿ ನೊಂದಣಿ ಮಾಡಿರುವರು ಎಂಬ ಪ್ರಶ್ನೆಗೆ ಸಾಕ್ಷಿಯು ಡೋರ ನಂಬರು ಕೊಟ್ಟು ತೆರಿಗೆ ಕಟ್ಟಿಸಿಕೊಂಡಿರುವರು ಎಂದು ನುಡಿದರು. ಉಪನೊಂದಣಾಧಿಕಾರಿಯವರ ಕಚೇರಿಯಲ್ಲಿ ನೊಂದಣಿ ಆದ ಕಾಲಕ್ಕೆ ದಾವಾ ಅಸ್ತಿ ನನ್ನ ಗಂಡನ ತಂದೆಯ ಹೆಸರಿನಲ್ಲಿತ್ತು. ನನ್ನ ಮಾವನವರು ಉಪನೊಂದಣಿ ಕಚೇರಿಗೆ ಬಂದು ನನ್ನ ಹೆಸರಿಗೆ ದಾವಾ ಅಸ್ತಿಯನ್ನು ನೊಂದಣಿ ಮಾಡಿ ಕೊಟ್ಟಿರುವುದಿಲ್ಲ. ಗ್ರಾಮ ಪಂಚಾಯತಿರವರಿಗೆ ದಾವಾ ಅಸ್ತಿಯನ್ನು ನನ್ನ ಹೆಸರಿಗೆ ನೊಂದಣಿ ಮಾಡಿಸಲು ಯಾವ ಅಧಿಕಾರ ಇರಲಿಲ್ಲ ಅಂದರೆ ಸರಿಯಲ್ಲ.

3. 1ನೇ ಪ್ರತಿವಾದಿಯು ದಾವಾ ಅಸ್ತಿಯನ್ನು ತನ್ನ ಸ್ವಂತ ಅದಾಯದಿಂದ ಚಿಗಟೇರಿ ಗ್ರಾಮದ ಮೈದೂರು ನಾಗಪ್ಪ ಇವರ ತಂದೆ ಕರೇಗೌಡ ಇವರಿಂದ ದಿನಾಂಕ 23.06.1973 ರಂದು ನೊಂದಾಯಿತ ಖರೀದಿ ಪತ್ರದ ಅಡಿಯಲ್ಲಿ ಖರೀಡಿದಿ ಮಾಡಿರುವರು ಅಂದರೆ ಸರಿಯಲ್ಲ. ಸದರಿ ಖರೀದಿ ಪತ್ರಕ್ಕೆ ಕೆಂಚನಗೌಡ ತಂದೆ ಸಣ್ಣಸಕ್ರಿಗೌಡ ಮತ್ತು ಹೇಮನಗೌಡ ತಂದೆ ವೀರಪ್ಪ ಇವರು ಸಾಕ್ಷಿದಾರರಾಗಿ ಸಹಿ ಮಾಡಿರುವರು ಅಂದರೆ ಸರಿಯಲ್ಲ. 1ನೇ ಪ್ರತಿವಾದಿ ಖರೀದಿ ಮಾಡಿದ ಕಾಲಕ್ಕೆ ದಾಾ ಅಸ್ತಿಯ ವಿಸ್ತೀರ್ಣ ಪೂರ್ವ ಪಶ್ಚಿಮ 36 ಅಡಿ ಮತ್ತು ಉತ್ತರ ದಕ್ಕಿಣ 19 ಅಡಿ ಇತ್ತು ಅಂದರೆ ಸರಿಯಲ್ಲ. ಆ ರೀತಿ ಖರೀದಿ ಮಾಡಿದ ನಂತರ 1ನೇ ಪ್ರತಿವಾದಿಯ ಹಸರಿಗೆ ಖಾತೆ ಬದಲಾವಣೆ ಆಗಿರುತ್ತದೆ ಅಂದರೆ ಸರಿಯಲ್ಲ. ದಾವಾ ಅಸ್ತಿಯಲ್ಲಿ ಪೂರ್ವ ದಿಕ್ಕಿನಲ್ಲಿ ಅರ್ದ

ಜಾಗದಲ್ಲಿ ವಾಸ ಮಾಡಲು 1ನೇ ಪ್ರತಿವಾದಿ ಮನೆಯನ್ನು ಕಟ್ಟಿಕೊಂಡಿರುವರು ಅಂದರೆ ಸರಿಯಲ್ಲ. ಪಶ್ಚಿಮದ ಅರ್ದ ಜಾಗದಲ್ಲಿ ದನ ಕರ ಕಟ್ಟಲು ಮತ್ತು ವ್ಯವಸಾಯದ ಉತ್ಪನ್ನಗಳನ್ನು ಇಡಲು ಉಪಯೋಗಿಸುತ್ತಿದ್ದರು ಅಂದರೆ ಸರಿಯಲ್ಲ.

4. ಪ್ರತಿವಾದಿಗೆ ಸೇರಿದ ದಾವಾ ಅಸ್ತಿಯನ್ನು ಕಬಳಿಸಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 1ನೇ ಪ್ರತಿವಾದಿ ಯಾವುದೇ ಕಾನೂನು ಬದ್ದ ದಾಖಲೆಯ ಮುಖಾಂತರ ಹಕ್ಕನ್ನು ನಮಗೆ ವರ್ಗಾವಣೆ ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ನನ್ನ ಗಂಡ ಹಾಗೂ ಅವರ ಸಹೋದರರು ಪಾಲು ವಿಭಾಗ ಮಾಡಿಕೊಂಡಿರುವರು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನಗೆ ದಾವಾ ಅಸ್ತಿಯ ಮೇಲೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಅಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

**04-12-2025**
**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** 04.12.2025